ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳು ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಹಿಂದಿನ ಕಥೆ ಸಮಸ್ಯೆಗಳನ್ನು ಪರಿಹರಿಸಿದ್ದೇವೆ ಎಂದು ಹೇಳಿದರು.

ನಟರಾಜ್ (ಡಿ ಎನ್‌ಕ್ಲೇವ್ ಬಡಾವಣೆ ಸದಸ್ಯರು) ಮಾತನಾಡಿ ಸದರಿ ಬಡಾವಣೆಯಲ್ಲಿ ಎಲ್ಇಡಿ ಬಲ್ಬ್‌ಗಳ ಸಮಸ್ಯೆ ಇದ್ದು, ಸಾರ್ವಜನಿಕರು ರಾತ್ರಿವೇಳೆ ಸಂಚಾರಿಸುವ ಸಂದರ್ಭದಲ್ಲಿ ತೊಂದರೆಯುಂಟಾಗಿರುವುದಾಗಿ ತಿಳಿಸಿದರು ಹಾಗೂ ಸದರಿ ಬಡಾವಣೆಯಲ್ಲಿ ಘನತ್ಯಾಜ್ಯದ ಸಮಸ್ಯೆ ಇರುತ್ತದೆ ನೀಡಿರುವ ಆಟೋ ಚಿಕ್ಕದಾಗಿದ್ದು, ಪರ್ಯಾಯ ವ್ಯವಸ್ಥೆ ಮಾಡುವಂತೆ ಸಭೆಗೆ ತಿಳಿಸಿದರು.

ಶ್ರೀಮತಿ. ಕವಿತ ಕಿ.ಆ.ನಿ ಕಸದ ಸಮಸ್ಯೆಯನ್ನು ಹಾಗೂ ಘನತ್ಯಾಜ್ಯ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ರವಿ, ಗುತ್ತಿಗೆದಾರರು ವಿದ್ಯುತ್ ವಿಭಾಗ ರವರು ಎಲ್ಇಡಿ ಬಲ್ಬ್‌ಗಳ ಸಮಸ್ಯೆಯನ್ನು ಸ್ಥಳಪರಿಶೀಲಿಸಿ ಬಗೆಹರಿಸುವುದಾಗಿ ತಿಳಿಸಿದರು.

ಶ್ರೀಮತಿ ಶಾಂತಕುಮಾರಿ, ಬಾಲಾಜಿ ಬಡಾವಣೆ ಬ್ಲಾಕ್ ಸ್ಪಾಟ್‌ನಲ್ಲಿ ಈಗಾಗಲೇ ಸ್ವಚ್ಛತೆ ಕಾಪಾಡಿದ್ದು, ಮುಂದೆ ಸದರಿ ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸಿ ಕಸವನ್ನು ಎಸೆಯುವವರ ವಿರುದ್ಧ ದಂಡವನ್ನು ವಿಧಿಸುವಂತೆ ತಿಳಿಸಿದರು.

ಶ್ರೀಮತಿ. ಕವಿತ ಕಿ.ಆ.ನಿ ಕಸದ ಸಮಸ್ಯೆಯನ್ನು ಹಾಗೂ ಘನತ್ಯಾಜ್ಯ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು.

ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ರವರು ಈ ವರ್ಷದ ಬಜೆಟ್‌ನಲ್ಲಿ ಕ್ಯಾಮರಾಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದರು.

ಶ್ರೀ ನರಸಿಂಹರೆಡ್ಡಿ ರವರು ಭದ್ರಪ್ಪ ಬಡಾವಣೆನಲ್ಲಿ ಮಳೆಯಿಂದ ಉಂಟಾದ ತೊಂದೆಗಳನ್ನು ತಿಳಿಸುತ್ತ ಚರಂಡಿ ಸಮಸ್ಯೆ ಹಾಗೂ ಮಳೆ ನೀರು ಮನೆಗೆ ನುಗ್ಗಿದ ಸಂರ್ದಬವನ್ನು ವಿವರಿಸಿದರು. ಶಾಂತಿನಿಕೇತನ್ ಶಾಲೆಯಿಂದ ದೊಡ್ಡ ಮಳೆ ನೀರು ಚರಂಡಿವರೆಗೂ ಫುಟ್‌ಪಾತ್ ಇಲ್ಲದಿರುವ ಕಾರಣ ಸಾರ್ವಜನಿಕರ ಹಾಗೂ ಶಾಲೆ ಮಕ್ಕಳ ಓಡಾಟಕ್ಕೆ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ರವರು ಸದರಿ ಸ್ಥಳವು ತಗ್ಗು ಪ್ರದೇಶವಾಗಿದ್ದು, ಚರಂಡಿ ಚಿಕ್ಕದಾಗಿರುವ ಕಾರಣ ಮಳೆನೀರು ಮನೆಗೆ ನುಗ್ಗುತ್ತಿದೆ ಹಾಗೂ ಚರಂಡಿಗಳು ರಸ್ತೆ ಮೂಲಭೂತ ಸೌಕರ್ಯ ವ್ಯಾಪ್ತಿಗೆ ಬರುವುದರಿಂದ ಅವರ ಅಧಿಕಾರಿಗಳಿಗೆ ಸ್ಥಳ ಪರೀಶಿಲನೆ ಮಾಡಿ ಸೂಕ್ತ ಕ್ರಮ ಜರುಗಿಸುವುದಾಗಿ ತಿಳಿಸುತ್ತಾರೆ.

ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ ರವರು ಆ ರಸ್ತೆಯು ರಸ್ತೆ ಮೂಲಭೂತ ಸೌಕರ್ಯ ವ್ಯಾಪ್ತಿಗೆ ಬರುತ್ತದೆ ಅವರೊಂಗೆ ಚರ್ಚಿಸಿ ಸ್ಥಳ ಪರೀಶಿಲನೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಹಾಗೂ ಮುಂದಿನ ಬಜೆಟ್ ನಲ್ಲಿ ಶೌಚಾಲಯ ಹಾಗೂ ಫುಟ್‌ಪಾತ್‌ಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತದೆ ಎಂದು ತಿಳಿಸಿದರು.

Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/ /2020-21

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 05/12/2020

**ದಿನಾಂಕ: 05-12-2020 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಡಾ॥ ದಯಾಕರ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) **(BWSSB)**
- ಶ್ರೀಮತಿ. ರಶ್ಮಿ, ತೋಟಗಾರಿಕೆ ಅಧೀಕ್ಷಕರು, ತೋಟಗಾರಿಕೆ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ಅರೋಗ್ಯ
- ಶ್ರೀ. ಗೋವಿಂದರಾಜು, ಅಭಿಯಂತರರು, (BESCOM)

**ವಾರ್ಡ್ ಸಮಿತಿ ಸದಸ್ಯರು**

- ಶ್ರೀಮತಿ. ಶಾಂತಮ್ಮ, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
- ಶ್ರೀ. ಪ್ರಕಾಶ್, ಮಾರುತಿನಗರ, ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
- ಶ್ರೀ ಶ್ರೀಕಾಂತ್, ಆಮ್ಕೋ ಬಡಾವಣೆ, ಸದಸ್ಯರು
- ಶ್ರೀ ನರಸಿಂಹರೆಡ್ಡಿ, ಭದ್ರಪ್ಪ ಬಡಾವಣೆ, ಸದಸ್ಯರು
- ಸುಬ್ರಮಣ್ಯ ರಾಜು, ಎಲ್.ಕೆ.ಆರ್ ಬಡಾವಣೆ, ಸದಸ್ಯರು
- ವೀರಣ್ಣ, ಎಲ್.ಕೆ.ಆರ್ ಬಡಾವಣೆ, ಸದಸ್ಯರು
- ನಟರಾಜ್, ಡಿ ಎನ್‌ಕ್ಲೇವ್ ಬಡಾವಣೆ, ಸದಸ್ಯರು

ಶ್ರೀಮತಿ ಶಾಂತಕುಮಾರಿ ರವರು ಬಾಲಾಜಿ ಬಡಾವಣೆ 6ನೇ ಮುಖ್ಯರಸ್ತೆಯಲ್ಲಿ ಶೌಚಾಲಯ ನಿರ್ಮಿಸಲು ಕೋರುತ್ತಾರೆ.

ನೋಡೆಲ್ ಅಧಿಕಾರಿಗಳು ಕಸದ ಬ್ಲಾಕ್‌ಸ್ಪಾಟ್‌ನ ವಿಷಯದ ಬಗ್ಗೆ ಚರ್ಚಿಸಿದರು. ಶ್ರೀಮತಿ. ಕವಿತ ಕಿ.ಆ.ನಿ ರವರು ಎರಡು ಜಾಗಗಳಲ್ಲಿ ಬ್ಲಾಕ್‌ಸ್ಪಾಟ್‌ನ ಸಮಸ್ಯೆಯು ಬಗೆಹರಿದಿದೆ ಎಂದು ಹೇಳಿದರು. ಸರೋವರ ಬಡಾವಣೆ, ಬಾಲಾಜಿ ಬಡಾವಣೆಗಳಲ್ಲಿ ಕಸದ ಸಮಸ್ಯೆಯು ಶೀಘ್ರದಲ್ಲಿ ಬಗೆಹರಿಸುವುದಾಗಿ ತಿಳಿಸಿದರು.

ಶ್ರೀ ಗುರು, ಕಾ.ಪಾ.ಅ ರವರು ಮಾತನಾಡುತ್ತ ಬಿಬಿಎಂಪಿ ಮೈ ಸಿಟಿ ಮೈ ಬಜೆಟ್ 2021–22 ವೆಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಾಗರಿಕರು ಇದರಲ್ಲಿ ಭಾಗವಹಿಸಬೇಕೆಂದು ಕೇಳಿದರು. ಈ ಕಾರ್ಯಕ್ರಮದಲ್ಲಿ ಶೌಚಾಲಯ ಹಾಗೂ ಫುಟ್‌ಪಾತ್‌ಗಳಿಗೆ ಆಧ್ಯತೆ ಮೇರೆಗೆ ಅನುದಾನವನ್ನು ಮೀಸಲಿಟ್ಟಿದ್ದು ನಾಗರಿಕರು ಹಾಗೂ ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು ತಮ್ಮ ಬಡಾವಣೆಗೆ ಬೇಕಾಗಿರುವ ಶೌಚಾಲಯ ಹಾಗೂ ಫುಟ್‌ಪಾತ್‌ಗಳ ನಿರ್ಮಾಣಕ್ಕಾಗಿ ಜಾಗಗಳನ್ನು ಗುರುತಿಸಿ ಕೊಡಬೇಕೆಂದು ತಿಳಿಸಿದರು.

ಎಲ್.ಕೆ.ಆರ್ ನಗರದ ಉಪಾಧ್ಯಕ್ಷರು ಶ್ರೀ. ಸುಬ್ರಮಣಿರಾಜು ಸದರಿ ಬಡಾವಣೆಯಲ್ಲಿ ನೀರಿನ ಸಮಸ್ಯೆ ಬಗೆಹರಿದ್ದಿದು, ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) **(BWSSB)** ರವರನ್ನು ಪ್ರಶಂಸಿಸಿದರು. ಸದರಿ ಬಡಾವಣೆಯ ರೈಲ್ವೆಟ್ರಾಕ್ ಸಮಾನಾಂತರವಾಗಿ ಸಾರ್ವಜನಿಕರು ಕಸದ ಬ್ಲಾಕ್‌ಸ್ಪಾಟ್ ಮಾಡಿದ್ದು ಅದನ್ನು ಸ್ವಚ್ಛಗೊಳಿಸಲು ಕೋರಿದರು ಹಾಗೂ ಮುಂದೆ ಸದರಿ ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸಿ ಕಸವನ್ನು ಎಸೆಯುವವರ ವಿರುದ್ಧ ದಂಡವನ್ನು ವಿಧಿಸುವಂತೆ ತಿಳಿಸಿದರು.

ಶ್ರೀ ಗುರು, ಕಾ.ಪಾ.ಅ ರವರು ಶ್ರೀಮತಿ. ಕವಿತ ಕಿ.ಆ.ನಿ ರವರಿಗೆ ಕಸದ ಸಮಸ್ಯೆಯನ್ನು ಹಾಗೂ ಘನತ್ಯಾಜ್ಯ ಸಮಸ್ಯೆಯನ್ನು ತೀವ್ರವಾದ ಶುಚಿಗೊಳಿಸುವಿಕೆಯನ್ನು ಪೌರಕಾರ್ಮಿಕರ ಹಾಗೂ ಸಾರ್ವಜನಿಕರ ಸಹಾಯದೊಂದಿಗೆ ಸ್ವಚ್ಛಗೊಳಿಸಲು ಹೇಳಿದರು. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರನ್ನು ಪ್ರಶೊಂಸಿಸಿದರು.

ಶ್ರೀ ಗುರು, ಕಾ.ಪಾ.ಅ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ಎ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

(ಶ್ರೀ ಗುರು)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08